ಮಕ್ಕಳು ಒಂದೊಂದು ಕಾರ್ಖಾನೆಯಲ್ಲಿ ಕೆಲಸವನ್ನು ಮಾಡುತ್ತಾರೆ. ಆದುದರಿಂದ ಅತ್ಯಂತ ತ್ವರಿತವಾಗಿ ಆ ಶಿಕ್ಷಣ ಸಂಸ್ಥೆಗೆ ಹೆಚ್ಚು ಸಹಾಯಕವಾದಂತಹ ಕೆಲಸವನ್ನು ಸರ್ಕಾರ ದವರು ಮಾಡಬೇಕು. ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಶಿಕ್ಷಣಕ್ಕೆ ಹೆಚ್ಚು ಸೌಲಭ್ಯ ಗಳನ್ನು ಕೊಡುತ್ತೇವೆ. ಬಹಳ ಬಡತನದಲ್ಲಿ ಓದುವಂತಹ ವಿದ್ಯಾರ್ಥಿಗಳಿಗೆ ಅನು ಕೂಲವಾಗುವಂತಹ ಐ.ಟಿ.ಐ. ಸಂಸ್ಥೆಗಳಿಗೆ ಅನುದಾನವನ್ನು ಕೊಡುವುದಕ್ಕೆ ಇಷ್ಟೊಂದು ವಿಳಂಬವನ್ನು ಮಾಡುತ್ತಿದ್ದೀರಿ. ಆದುದರಿಂದ ದಯವಿಟ್ಟು ಈ ವಿಷಯದಲ್ಲಿ ನಿರರ್ಗಳ ವಾಗಿ ಚರ್ಚೆಯಾಗಿದೆ. ಆದುದರಿಂದ ಸರ್ಕಾರ ಇದರ ಬಗ್ಗೆ ಒಂದು ಕಾಲವನ್ನು ನಿಗಧಿ ಮಾಡಬೇಕು. ಆದುದರಿಂದ ತಮ್ಮ ಮೂಲಕ ಸರ್ಕಾರ ಒಂದು ಕಾಲವನ್ನು ನಿಗಧಿ ಮಾಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಎಶ್ವೇಶ್ವರ ಹೆಗ್ಗಡೆ ಕಾಗೇರಿ** :- ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ಆಗಸ್ಟ್ ಒಳಗಡೆ ನಿಶ್ಚಯ ಮಾಡಬೇಕಾಗುತ್ತದೆ. ಆಗಸ್ಟ್ ಸೆಪ್ಟೆಂಬರ್‌ನಲ್ಲಿ ಹೊಸ ವರ್ಷ ಪ್ರಾರಂಭವಾಗುತ್ತದೆ. ಆದುದರಿಂದ ಹೊಸ ವರ್ಷ ಪ್ರಾರಂಭವಾಗುವುದರಿಂದ ಆಗಸ್ಟ್ ಒಳಗಡೆ ಗೌರ್ಮೆಂಟ್ ಆರ್ಡರ್ ಹೊರಡಿಸುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ಸ್ಪಷ್ಟಪಡಿಸಬೇಕಾಗುತ್ತದೆ.

(ಈ ಹಂತದಲ್ಲಿ ಶ್ರೀ ಕೆ. ಎಸ್. ಪುಟ್ಟಣಯ್ಯನವರು ಸದನದ ಭಾವಿಯಲ್ಲಿ ಬಂದು ಧರಣಿಯನ್ನು ಮಾಡಿದರು)

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ** :- ಮಾನ್ಯ ಉಪಾಧ್ಯಕ್ಷರೇ, ಈಗ ಈ ಸದನದಲ್ಲಿ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳಿದ್ದಾರೆ. ಈಗ ಮಾನ್ಯ ಸದಸ್ಯರು ಐ.ಟಿ.ಐ. ಪ್ರಶ್ನೆಯನ್ನು ಸದನದಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ. ಅದನ್ನು ಮಾನ್ಯ ಉಪಮುಖ್ಯಮಂತ್ರಿಗಳು ನೋಡಿ ಪರಿಶೀಲಿಸಿ ಒಂದು ತೀರ್ಮಾನವನ್ನು ತೆಗೆದು ಕೊಳ್ಳುತ್ತೇನೆಂದು ಹೇಳಿದ್ದಾರೆ. ಆದರೆ ಈ ಪ್ರಶ್ನೆ ಏನಿದೆ ಇದು ಒಂದೇ ಸಂಸ್ಥೆಯದು ಅಲ್ಲ. ನನಗೆ ಗೊತ್ತಿರುವ ಹಾಗೆ ಅನುದಾನ ರಹಿತವಾದಂತಹ ಸಂಸ್ಥೆಗಳು ಎಷ್ಟು ಇವೆ ಶಿಕ್ಷಣ ಇಲಾಖೆಯಲ್ಲಿ ಶಾಶ್ವತವಾಗಿ ಅನುದಾನ ರಹಿತ ಶಾಲೆಗಳು ಎಂದು ತೆರೆಯಲು ಅವಕಾಶವನ್ನು ಕೊಟ್ಟಿದ್ದಾರೆ. ಇದರಲ್ಲಿ ಸಾಕಷ್ಟು ಪ್ರಾಥಮಿಕ ಶಾಲೆಗಳು, ಮಾಧ್ಯಮಿಕ ಶಾಲೆಗಳು, ಕಾಲೇಜುಗಳನ್ನು ಕೊಟ್ಟಿದ್ದಾರೆ. ಅದೇ ರೀತಿಯಾಗಿ ಈ ಸಂಸ್ಥೆಗಳೂ ಸಹ ಇವೆ. ಈಗ ಏನಾಗುತ್ತಿದೆ ಎಂದರೆ, ತಾವು ಯಾವಾಗಲೂ ತೀರ್ಮಾನ ತೆಗೆದು ಕೊಳ್ಳುವಾಗ ಅಲ್ಲಿಯ ರೋಸ್ಟರ್ ಸಿಸ್ಟಂ ಮತ್ತು ಅಲ್ಲಿಯ ಅಪಾಯಿಂಟ್‌ಮೆಂಟ್, ಅಲ್ಲಿಯ ಗ್ರಾಂಟ್ಸ್ ಇವುಗಳೆಲ್ಲವನ್ನೂ ನೋಡುವಂತಹ ಅವಶ್ಯಕತೆ ಇದೆ ಎನ್ನತಕ್ಕಂತಹ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಏಕೆಂದರೆ ಇದರ ಹಿಂದೆ 50-60 ಸಾವಿರ ಅಪಾಯಿಂಟ್ ಗಳನ್ನು ಸುಪ್ರೀಂ ಕೋರ್ಟ್ ಆದೇಶವಿದೆ ಎಂದು ಹೇಳಿ ರೆಗ್ಯೂಲರೈಜ್ ಮಾಡಿ. ನೀವು ನಾವು ಎಲ್ಲರೂ ಸಹ ಸೇರಿ ಒಂದು ರೆಜೂಲ್ಯೂಷನ್ ಏನು ಮಾಡಿದ್ದೇವೆಂದರೆ, ವಿಶೇಷ ನೇಮಕಾತಿಯನ್ನು ಮಾಡುತ್ತೇವೆ, ಆ ರೋಸ್ಟರ್ ಸಿಸ್ಟಂ ಪ್ರಕಾರವಾಗಿ ತುಂಬ ತಕ್ಕಂತಹ ಹುದ್ದೆಗಳನ್ನು ತುಂಬುತ್ತೇವೆಂದು ಹೇಳಿದ್ದೇವೆ. ಆದರೆ ಇಲ್ಲಿಯವರೆಗೆ ಆ